| ಓ ಎಸ್ | 96/2019 | ಪಿ.ಡಬ್ಲ್ಯೂ 1 |
|---|---|---|

ಇಂದು ದಿಃ 06/08/2024 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.
ಮುಂದುವರೆದ ಮುಖ್ಯ ವಿಚಾರಣೆಃ ವಾದಿಪರ ವಕೀಲರಿಂದಃ

ನಿ ಪಿ 6 ರಲ್ಲಿರುವ ಸಾಕ್ಷಿ ಸಹಿಯನ್ನು ಗುರುತಿಸಿದ್ದು ಅದನ್ನು ನಿ ಪಿ 6 ಎ ಇಂದ ಡಿ ಎಂದು ಗುರುತಿಸಲಾಯಿತು. 5 ಛಾಯಾಚಿತ್ರಗಳನ್ನು ನಿ ಪಿ 7 ಇಂದ 11 ಎಂದು, ಸಿಡಿ ಪೆನ್ ಡ್ರೈವ್ ಅನ್ನು ನಿ ಪಿ 12 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಶ್ರೀ ಡಿ ಜೆ ವಕೀಲರಿಂದಃ

ನಾನು 7 ತರಗತಿವರೆಗೆ ಓದಿದ್ದೇನೆ. ಇಂಗ್ಲಿಷ್ ಓದಲು ಬರುವುದಿಲ್ಲ. ಕನ್ನಡ ಬರುತ್ತೆ. ನಾನು ಸಹಿಯನ್ನು ಇಂಗ್ಲಿಷ್ ನಲ್ಲಿ ಮಾಡುತ್ತೇನೆ. ದಾವಾ ಆಸ್ತಿಯನ್ನು ಹೊರತುಪಡಿಸಿ ನನಗೆ ಜಮೀನು ಮತ್ತು ಮನೆ ಇದೆ. ನಾನು ತಾಯೂರಿನಲ್ಲಿ ವಾಸವಿದ್ದೇನೆ. ನನ್ನ ಗಂಡ 2 ವರ್ಷದ ಹಿಂದೆ ತಪಟ್ಟಿದ್ದಾರೆ ನನಗೆ ಮಕ್ಕಳಿಲ್ಲ. ನನಗೆ ಪ್ರತಿವಾದಿಯು 4 ವರ್ಷಗಳಿಂದ ಗೊತ್ತು. ನನಗೆ ಜೆ ಎಸ್ ಎಸ್ ಆಸ್ಪತ್ರೆ ಬಳಿ ಮನೆ ಇದ್ದು ಓಡಾಡಲು ಅನುಕೂಲಕ್ಕಾಗಿ ಮನೆ ಖರೀದಿಸಿದ್ದೆ. 65 ಲಕ್ಷದ ಮಾರಾಟ ಮೊತ್ತಕ್ಕೆ ಮಾತುಕತೆ ಆಗಿತ್ತು. ನನ್ನ ಗಂಡ ವ್ಯವಸಾಯಗಾರ. ನಮಗೆ ವ್ಯವಸಾಯ ಹೊರತುಪಡಿಸಿ ಬೇರೆ ಆದಾಯ ಇಲ್ಲ. ನಾವು ಆದಾಯ ತೆರಿಗೆ ಪಾವತಿದಾರರಲ್ಲ. ನಮಗೆ ರೂ.60,000/- ಆದಾಯ ಇದೆ. ಜಮೀನಿನಲ್ಲಿ ಬರುತ್ತಿದ್ದ ಆದಾಯ ಸಂಸಾರ ಸಾಗಿಸಲು ಸಾಕಾಗುತಿತ್ತು. ನಾನು ಜಮೀನು ಮಾರಾಟ ಮಾಡುತ್ತಿದ್ದೇನೆ ಎಂದು ಪ್ರತಿವಾದಿಗೆ ಕುಮಾರ್ ರಿಂದ ಗೊತ್ತಾಯಿತು. ಅವರು ನನಗೆ 6-7 ವರ್ಷಗಳಿಂದ ಪರಿಚಯ. ಮಾತನಾಡುತ್ತಿದ್ದಾಗ ಮಾರಾಟ ಮಾಡುವ ಬಗ್ಗೆ ಹೇಳಿದ್ದೆ. ನನಗೆ ನೇರವಾಗಿ ಪ್ರತಿವಾದಿ ಪರಿಚಯವಿಲ್ಲ. ರಾಮಾನುಜಂ ರಸ್ತೆಯಲ್ಲಿರುವ ಹೊಟೇಲ್ ನಲ್ಲಿ ಮಾತುಕತೆ ಆಗಿತ್ತು. ಆ ಹೊಟೇಲ್ ನಲ್ಲಿ ನಾನು, ಕುಮಾರ್, ಪ್ರತಿವಾದಿ, ತಂಗಿ, ತಂಗಿಯ ಮಗ ಇದ್ದೆವು. ರೂ. 55,00,000/- ಕ್ಕೆ ಮಾರಾಟದ ಮಾತುಕತೆ ಆಗಿತ್ತು.

ಮಾರಾಟದ ಮಾತುಕತೆಯ ರೂ.48,00,000/- ಗೆ ಆಗಿದೆ ಎಂದು ನೋಟೀಸ್ ನಲ್ಲಿ ಹೇಳಿದ್ದು ಅಂದರೆ ಮಾರಾಟದ ವ್ಯವಹಾರವು ರೂ.48,00,000/- ಕ್ಕೆ ಆಗಿತ್ತು ಎಂದರೆ ನಿಜ. ಮಾತುಕತೆಯಾಗಿ 2-3 ದಿನಗಳಲ್ಲಿ ಕರಾರು ಬರೆಸುಕೊಟ್ಟೆ ರೂ.10,00,000/- ನಗದಲ್ಲಿ ಕೊಟ್ಟೆ. ಆಗ ನನ್ನ ಗಂಡ ಇದ್ದರು. ನನ್ನ ಗಂಡ ಕರಾರಿಗೆ ಪಕ್ಷಕಾರರಾಗಿರಲಿಲ್ಲ, ಆಸ್ತಿಯು ನನ್ನ ತಾಯಿ ಕಡೆ ಇಂದ ಬಂದ ಆಸ್ತಿ. ರೂ.10,00,000/- ಯಾರಿಗೆ ನಾನು ಮನೆ ಖರೀದಿಸಬೇಕೆಂದು ಉದ್ದೇಶಿಸಿದ್ದ ಮಾರಾಟಗಾರರಿಗೆ ಕೊಟ್ಟೆ. ನಾನು ಮತ್ತು ಮನೆ ಖರೀದಿಸಿದ ಕುರಿತು ಮಾರಾಟ ಕರಾರು ಆಗಿದ್ದು ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದು. ಸಾಕ್ಷಿಯು ಮುಂದುವರೆದು ಮಾರಾಟ ಆಗಿಲ್ಲ, ಭೋಗ್ಯ ಆಗಿತ್ತು ಎಂದು ನುಡಿಯುತ್ತಾರೆ. ಮಾರಾಟ ಆಗುವ ಮೊದಲು ಭೋಗ್ಯಕ್ಕೆ ಇದೆ. ರೂ.5,00,000/- ಭೋಗ್ಯ ಇತ್ತು. ಪ್ರತಿವಾದಿಯಿಂದು ಪಡೆದುಕೊಂಡಿದ್ದ ರೂ.10,00,000/- ನನ್ನ ಗಂಡನ ಚಿಕಿತ್ಸೆಯ ವೆಚ್ಚವಾಗಿ ಬಳಸಿಕೊಂಡಿದ್ದೆ. ಆ ವಿಚಾರ ನಾನು ನನ್ನ ಪ್ರಮಾಣಪತ್ರದಲ್ಲಿ ಹೇಳಿಲ್ಲ.

| ಓ ಎಸ್ | 96/2019 | ಪಿ.ಡಬ್ಲ್ಯೂ 1 |
|---|---|---|

ದಾವೆ ಹಾಕಲು ಮಾಹಿತಿಗಳನ್ನು ನನ್ನ ವಕೀಲರಿಗೆ ನಾನೇ ಕೊಟ್ಟಿದ್ದೆ. ಮುಂಗಡವಾಗಿ ಕೊಟ್ಟ ಹಣವನ್ನು ನೇರವಾಗಿ ಮಂಜುನಾಥ್ ರವರಿಗೆ ಕೊಟ್ಟಿದ್ದು ಎಂದು ದಾವೆಯಲ್ಲಿ ಬರೆಸಿದ್ದು ಸುಳ್ಳು. ನನ್ನ ಮುಖ್ಯವಿಚಾರಣೆ ಪ್ರಮಾಣಪತ್ರದಲ್ಲಿ ಇದೇ ವಿಚಾರ ಹೇಳಿದ್ದು ಸುಳ್ಳು. ಕರಾರು ಬರೆದುಕೊಟ್ಟ ನಂತರ 3 ತಿಂಗಳ ನಂತರ ದಾಖಲೆ ಹೊಂದಿಸಿಕೊಂಡಿದೆ. ಕರಾರಾದ ಸಂದರ್ಭದಲ್ಲಿ ವಂಶವೃಕ್ಷ, ಆರ್ ಟಿ ಸಿ, ಇ ಸಿ ಇದರ ದಾಖಲೆಗಳನ್ನು ಕೊಟ್ಟಿದ್ದೆ. ಪ್ರತಿವಾದಿಗೆ ಕೊಟ್ಟ ನೋಟೀಸಿನಲ್ಲಿ ಯಾವೆಲ್ಲ ದಾಖಲೆಗಳನ್ನು ಕೊಟ್ಟಿದ್ದೆ ಎಂದು ಹೇಳಿದ್ದು ಅವುಗಳನ್ನು ಪ್ರತಿಯನ್ನು ಹಾಜರುಮಾಡಿದ್ದೇನೆ. ಆ ದಾಖಲೆಗಳು ದ್ವಿಪ್ರತಿ ಇದ್ದು ಮುಂದಿನ ವಿಚಾರಣಾ ದಿನಾಂಕದಂದು ಕೊಡಬಹುದು. 3 ತಿಂಗಳೊಳಗಡೆ ನಾನು ಪ್ರತಿವಾದಿಗೆ ದಾಖಲೆಗಳನ್ನು ಒದಗಿಸಿಲ್ಲ ಮತ್ತು ಆ ವಿವರಗಳನ್ನು ನೋಟಿಸಿನಲ್ಲಿ ನಮೂದಿಸಿಲ್ಲ ಎಂದು ಪ್ರತಿವಾದಿ ಹೇಳಿದ್ದಾರೆ ಎಂದರೆ ಸುಳ್ಳು. 3 ತಿಂಗಳ ಒಳಗಡೆ ಪ್ರತಿವಾದಿಯು ದಾಖಲೆಗಳನ್ನು ಪಡೆದುಕೊಂಡಿದ್ದರೂ ಸಹ ಕ್ರಯಪತ್ರ ಬರೆದುಕೊಡಲು ನಾನು ಇಲ್ಲಸಲ್ಲದ ಸಬೂಬು ಹೇಳುತ್ತಿದ್ದೆ ಎಂದರೆ ಸರಿಯಲ್ಲ. 3 ತಿಂಗಳು ಕಳೆದ ನಂತರ ಕರಾರು ಪತ್ರದಂತೆ ಜಮೀನು ಕೊಡಬಾರದು ಎನ್ನುವ ಉದ್ದೇಶದಿಂದ ವಕೀಲರ ಮುಖಾಂತರ ನೋಟೀಸ್ ಕೊಟ್ಟಿದ್ದೆ ಎಂದರೆ ಸರಿಯಲ್ಲ. ವಕೀಲರು ಕೊಟ್ಟ ನೋಟೀಸಿಗೆ ಪ್ರತಿವಾದಿಯು ಸೂಕ್ತ ಉತ್ತರ ಕೊಟ್ಟಿದ್ದಾರೆ ಎಂದರೆ ಕೊಟ್ಟಿರುತ್ತಾರೆ. ಆ ಪ್ರತ್ಯುತ್ತರ ನೋಟೀಸಿನಲ್ಲಿ ಅವರು ತಯಾರಿದ್ದರು ಸಹ ಕ್ರಯಪತ್ರ ಬರೆದುಕೊಡಲು ನಾನೇ ತಯಾರಿಲ್ಲ ಎಂದು ಬರೆದಿದ್ದಾರೆ ಎಂದರೆ ಸರಿಯಲ್ಲ. ಜಮೀನನ್ನು ಹದ್ದುಬಸ್ತು ಮಾಡಿದ್ದ ದಾಖಲೆಗಳು ನನ್ನ ಬಳಿ ಇವೆ. ಯಾವುದೇ ಒಂದು ಜಮೀನಿಗೆ ಸರ್ಕಾರಿ ಮೌಲ್ಯ ಮಾರುಕಟ್ಟೆ ಮೌಲ್ಯ ಇರುತ್ತೆ ಎಂದರೆ ಸರಿ. ಸರ್ಕಾರಿ ಮಾರುಕಟ್ಟೆ ಮೌಲ್ಯದ ಮೊತ್ತಕ್ಕೆ ಪ್ರತಿವಾದಿಗೆ ಕರಾರು ಬರೆದುಕೊಟ್ಟಿದ್ದೆ ಎಂದರೆ ಸರಿ. ನಂತರ ರೂ.48,00,000/- ಮತ್ತು ಮುಂಗಡ ಹಣಕ್ಕೆ ಇನ್ನೊಂದು ಕರಾರು ಮಾಡಿಕೊಟ್ಟಿದೆ ಎಂದರೆ ಸರಿ 2ನೇ ಕರಾರು ಬರೆದಾಗ ನಾನು ಆ ಕರಾರನ್ನು ಸಂಪೂರ್ಣ ರೂ.48,00,000/- ಕ್ಕೆ ಬರೆದುಕೊಟ್ಟಿದ್ದೆ ಎಂದರೆ ಸರಿ.

ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಯಿತು.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ ಎಂ ಎಫ್ ಸಿ., ನಂಜನಗೂಡು.